

# ವಿಜಯ ಪಥ

ಬೆಳಚಿಕ್ಕನಹಳ್ಳಿ ಶ್ರೀನಾಥ್
ಚಿತ್ರಗಳು: ಇರ್ಷಾದ್ ಮಹಮ್ಮದ್

‘ಹಿರಿಯ ಚಿತ್ರ ನಿರ್ದೇಶಕ ವಿಜಯ್ ಬೆಂಗಳೂರಿಗೆ ಬರುತ್ತಿದ್ದಾರೆ...’ ವಿಜಯ್ ಅವರ ಸಹಾಯಕ ನಿರ್ದೇಶಕರಾಗಿದ್ದ ಕೋಲಾರ ನಾಗೇಶ್ ಅವರಿಂದ ಕೆಲವು ತಿಂಗಳ ಹಿಂದೆ ಈ ಸುದ್ದಿ ತಿಳಿದ ಗಳಿಗೆಯಿಂದ ‘ಸುಧಾ’ ನಾಗೇಶ್ ಅವರ ಬೆನ್ನಿಗೆ ಬಿತ್ತು. ಹೇಗಾದರೂ ಮಾಡಿ ವಿಜಯ್ ಅವರನ್ನು ಸಂದರ್ಶಿಸಬೇಕು; ಅವರು ನಿರ್ದೇಶಿಸಿದ ಅತ್ಯುತ್ತಮ ಚಿತ್ರಗಳ ಬಗ್ಗೆ, ಆ ಚಿತ್ರಗಳು ಮೈದಾಳಿದ ಪರಿಯ ಬಗ್ಗೆ, ಅವರೊಂದಿಗೆ ಕೆಲಸ ಮಾಡಿದ ಮೇರು ನಟರ ಬಗ್ಗೆ ಅವರಿಂದಲೇ ಮಾಹಿತಿ ಪಡೆಯಬೇಕು ಎನ್ನುವ ತಪನೆ ಹೆಚ್ಚಾಗತೊಡಗಿತು.

ಬಿ. ವಿಜಯಾ ರೆಡ್ಡಿ ಎಂತಲೂ ಗುರುತಿಸಿಕೊಳ್ಳುವ ವಿಜಯ್ ಅಂತಿಂಥ ನಿರ್ದೇಶಕರಲ್ಲ: ‘ಗಂಧದ ಗುಡಿ’, ‘ಮಯೂರ’, ‘ಸನಾದಿ ಅಪ್ಪಣ್ಣ’ದಂಥ ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳನ್ನು ಕನ್ನಡಿಗರಿಗೆ ನೀಡಿದವರು; ಶಂಕರ್‌ನಾಗ್ ನಾಗ್ ಅವರನ್ನು ‘ಆಟೋ ರಾಜ’ನನ್ನಾಗಿ ಮಾಡಿದವರು. ಅನಂತನಾಗ್‌ರಂಥ ಸುಂದರಾಂಗನನ್ನು ‘ನಾ ನಿನ್ನ ಬಿಡಲಾರೆ’ ಚಿತ್ರದ ಹಾರರ್ ಪಾತ್ರದಲ್ಲಿ ತೋರಿಸಿದವರು. ಸಸ್ಪೆನ್ಸ್ ಥ್ರಿಲ್ಲರ್, ಕಾದಂಬರಿ ಆಧಾರಿತ, ಸಾಹಸಪ್ರಧಾನ, ಸಂಗೀತಪ್ರಧಾನ, ಹಾಸ್ಯಪ್ರಧಾನ, ತಾಯಿ ಸೆಂಟಿಮೆಂಟ್ – ಹೀಗೆ ಬಹುತೇಕ ಎಲ್ಲ ಬಗೆಯ ಕಥಾಹಂದರದ ಚಿತ್ರಗಳನ್ನು ನಿರ್ದೇಶಿಸಿ ಬೆರಗು ಮೂಡಿಸಿದವರು.

ಸುಮಾರು 40 ಚಿತ್ರಗಳನ್ನು ನಿರ್ದೇಶಿಸಿದ ವಿಜಯ್ ಅವರ ಬಗ್ಗೆ ಕನ್ನಡ ಚಿತ್ರರಂಗದಲ್ಲಿ ಹೆಚ್ಚಿನವರಿಗೆ ಗೊತ್ತಿಲ್ಲ; ಅವರ ಬಗ್ಗೆ ಕನಿಷ್ಠ ಮಟ್ಟದ ತಿಳಿವಳಿಕೆ ಹೊಂದಿದವರೇ ಅಪರೂಪ. ವಿಜಯ್ ಅವರು ಚೆನ್ನೈನಲ್ಲಿ ನೆಲೆಸಿರುವುದೂ ಹೀಗಾಗಲು ಒಂದು ಮುಖ್ಯ ಕಾರಣ. ಈ ಹಿನ್ನೆಲೆಯಲ್ಲಿ ಅವರನ್ನು ಕಂಡು ಮಾತನಾಡಲು ‘ಸುಧಾ’ ತೀವ್ರ ಪ್ರಯತ್ನ ನಡೆಸಿತು. ಕೊನೆಗೂ ಆ ದಿನ ಬಂದೇ ಬಂದಿತು; ವಿಜಯ್ ಬೆಂಗಳೂರಿಗೆ ಬಂದಿದ್ದಾರೆ ಎನ್ನುವುದನ್ನು ತಿಳಿದು ನಾವು ಛಾಯಾಗ್ರಾಹಕರೊಂದಿಗೆ ಬೆಂಗಳೂರಿನ ಜಗದೀಶ ನಗರದ ಮನೆಯೊಂದಕ್ಕೆ ಹೋದೆವು. ಇಸ್ರೋದಲ್ಲಿ ಹಿರಿಯ ವಿಜ್ಞಾನಿಯಾಗಿ ನಿವೃತ್ತರಾಗಿರುವ ತ್ರಿನಾಥ್ ರೆಡ್ಡಿ ಅವರ ಮನೆ ಅದು. ತ್ರಿನಾಥ್ ರೆಡ್ಡಿ ವಿಜಯ್ ಅವರ ಹಿರಿಯ ಮಗ.

## ಅನಾರೋಗ್ಯ-ಜೀವನೋತ್ಸಾಹದ ಯುಗಳ

ವಿಜಯ್ ಅವರಿಗೆ ಈಗ 83 ವರ್ಷ ವಯಸ್ಸು. ವಯೋಸಹಜ ಕಾಯಿಲೆಗಳಿಂದ ಹಣ್ಣಾಗಿದ್ದಾರೆ. ಮೂರು ವರ್ಷಗಳ ಹಿಂದಿನವರೆಗೂ ಚೆನ್ನಾಗಿ ಓಡಾಡಿಕೊಂಡಿದ್ದ ಅವರು, ಒಮ್ಮೆ ಮಧುಮೇಹ ಹೆಚ್ಚಾಗಿ ಚಿಕಿತ್ಸೆಗೆಂದು ಚೆನ್ನೈನ ಪ್ರಸಿದ್ಧ ಆಸ್ಪತ್ರೆ ಸೇರಿದರು. ಒಂದು ಕಾಯಿಲೆ ಗುಣ ಮಾಡಿದ ವೈದ್ಯರು ಪರೋಕ್ಷವಾಗಿ ಹತ್ತಾರು ಕಾಯಿಲೆ ಅಮರಿಕೊಳ್ಳಲು ಕಾರಣರಾಗಿದ್ದರು. ಅದರ ಫಲವಾಗಿ ವಿಜಯ್ ಬಹುಅಂಗಾಂಗ ವೈಫಲ್ಯದೊಂದಿಗೆ ಆಸ್ಪತ್ರೆಯಿಂದ